# ಶ್ರೀ ಸುತ್ತೂರು ಮಠ

ಚಾಮುಂಡಿಬೆಟ್ಟದ ತಪ್ಪಲು, ಮೈಸೂರು

# ಬೆಳದಿಂಗಳ ಸಂಗೀತ 278

**12 ಏಪ್ರಿಲ್ 2025 * ಶನಿವಾರ * ಸಂಜೆ 6.00**

ದಿವ್ಯ ಸಾನ್ನಿಧ್ಯ

## ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು

ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಸುತ್ತೂರು ಶ್ರೀಕ್ಷೇತ್ರ

ಗಾಯನ




ವಿದುಷಿ ಧನ್ಯಾ ದಿನೇಶ್ ರುದ್ರಪಟ್ಟಣಂ



ವಯೊಲಿನ್

ವಿದುಷಿ ಸಿ.ವಿ. ಶ್ರುತಿ



ಮೃದಂಗ

ವಿದ್ವಾನ್ ಎ. ರಾಧೇಶ್



ಘಟಂ

ವಿದ್ವಾನ್ ಎಸ್. ಮಂಜುನಾಥ್

**ಸರ್ವರಿಗೂ ಹಾರ್ದಿಕ ಸುಸ್ವಾಗತ**

**ವಿದುಷಿ ಧನ್ಯಾ ದಿನೇಶ್ ರುದ್ರಪಟ್ಟಣಂರವರು** ಉದಯೋನ್ಮುಖ ಕರ್ನಾಟಕ ಸಂಗೀತಗಾರರು. ಚಿಕ್ಕ ವಯಸ್ಸಿನಲ್ಲಿಯೇ ಸಂಗೀತದ ಆಕರ್ಷಣೆ ಹೊಂದಿದ್ದವರು ಕೆಲವು ಕಾಲ ಚೆನ್ನೈನ ವಿದ್ವಾನ್ ನೈವೇಲಿ ಆರ್. ಸಂತಾನಗೋಪಾಲನ್‌ರವರ ಶಿಷ್ಯರಾಗಿದ್ದರು. ಅನಂತರ ವಿದ್ವಾನ್ ಡೆಲ್ಲಿ ಪಿ. ಸುಂದರರಾಜನ್‌ರವರ ಬಳಿ ಸಂಗೀತ ಕಲಿಕೆಯನ್ನು ಮುಂದುವರಿಸಿದರು. ಬೆಂಗಳೂರಿನ ಗಾಯನ ಸಮಾಜ ಮತ್ತು ಮೈಸೂರಿನ ಜೆಎಸ್‌ಎಸ್ ಸಂಗೀತಸಭೆಯ ವಾರ್ಷಿಕ ಸಮ್ಮೇಳನಗಳಲ್ಲಿ ಕಾರ್ಯಕ್ರಮ ನೀಡಿರುವರು. ಉದಯೋನ್ಮುಖ ಸಂಗೀತಗಾರರಿಗಾಗಿ ನಡೆದ ರಾಷ್ಟ್ರೀಯ ಮಟ್ಟದ ಸಂಗೀತ ಸ್ಪರ್ಧೆಯ ಬಹುಮಾನಿತರಾಗಿದ್ದಾರೆ. ಮೈಸೂರಿನ ನಾದಬ್ರಹ್ಮ ಸಂಗೀತ ಸಭೆಯ "ನಾದಕಿಶೋರಿ" ಪ್ರಶಸ್ತಿಗೆ ಭಾಜನರು. ಕರ್ನಾಟಕ, ತಮಿಳುನಾಡು, ಕೇರಳ ರಾಜ್ಯಗಳಲ್ಲಿ ಅಸಂಖ್ಯಾತ ಕಾರ್ಯಕ್ರಮಗಳನ್ನು ನೀಡಿರುವ ಖ್ಯಾತಿ. ಅಖಿಲ ಭಾರತ ಆಕಾಶವಾಣಿಯ ಬಿ-ಹೈ ಶ್ರೇಣಿಯ ಕಲಾವಿದರು. ತ್ರಿಸ್ಥಾಯಿಯಲ್ಲಿಯೂ ಸರಾಗವಾಗಿ ನುಡಿಯುವಂಥ ಶಾರೀರ, ಶಾಸ್ತ್ರಶುದ್ಧಿ, ಸಾಹಿತ್ಯನಿಷ್ಠೆ ಮುಂತಾದ ಗುಣಗಳಿಂದ ಕೂಡಿದ ಸುಮಧುರ ಗಾಯನದಿಂದ ಶ್ರೋತೃಗಳು ಮತ್ತು ವಿಮರ್ಶಕರ ಪ್ರಶಂಸೆಗೆ ಪಾತ್ರರಾಗಿದ್ದಾರೆ. ಪ್ರಸ್ತುತ ಚೆನ್ನೈನಲ್ಲಿ ನೆಲೆಸಿರುವರು.

**ವಿದುಷಿ** ಸಿ.ವಿ. **ಶ್ರುತಿಯವರು** ಸಂಗೀತದ ಕೌಟುಂಬಿಕ ಹಿನ್ನೆಲೆಯುಳ್ಳವರು. ಸಂಗೀತದ ಪ್ರಾಥಮಿಕ ಶಿಕ್ಷಣವನ್ನು ಅವರ ತಾತನವರಾದ ಶ್ರೀ ಸಿ.ಎಸ್. ನಾಗರಾಜರವರಿಂದ ಕಲಿತರು. ಬಳಿಕ ಮೈಸೂರಿನ ಖ್ಯಾತ ವಯೊಲಿನ್ ವಿದ್ವಾಂಸರಾದ ಶ್ರೀ ಎಚ್.ಕೆ. ನರಸಿಂಹಮೂರ್ತಿಯವ ಬಳಿ ಶಿಷ್ಯವೃತ್ತಿ ಕೈಗೊಂಡರು. ಪ್ರಸ್ತುತ ಅಕ್ಕರೈ ಸಹೋದರಿಯರ ಬಳಿ ಉನ್ನತ ಸಂಗೀತ ಶಿಕ್ಷಣ ಮುಂದುವರಿಕೆ.

ಗಾನಭಾರತಿ ಸಂಸ್ಥೆಯ ನಾದಕಿಶೋರೋತ್ಸವದ (2019) ಅತ್ಯುತ್ತಮ ಪಕ್ಕವಾದ್ಯ ಸಾಥಿ ಪ್ರಶಸ್ತಿ ಪುರಸ್ಕೃತರು; ನಾದಮಯ ಸಂಸ್ಥೆಯಿಂದ (2022) 'ವಯೊಲಿನ್ ಸೋಲೋ' ಮತ್ತು 'ಪಕ್ಕವಾದ್ಯ' ಎರಡರಲ್ಲೂ ಅತ್ಯುತ್ತಮ ಸಾಧನೆಗಾಗಿ ಪ್ರಶಸ್ತಿ ಪಡೆದಿದ್ದಾರೆ. ಮೈಸೂರು ಆಕಾಶವಾಣಿಯ "ಎ" ಶ್ರೇಣಿ ಕಲಾವಿದರು.

**ವಿದ್ವಾನ್ ಎ. ರಾಧೇಶ್‌ರವರು** ಮೈಸೂರಿನ ಯುವ ಪ್ರತಿಭಾವಂತ ಮೃದಂಗ ಕಲಾವಿದರಲ್ಲೊಬ್ಬರು. ಕೀರ್ತಿಶೇಷ ವಿದ್ವಾನ್ ಪಿ.ಜಿ. ಲಕ್ಷ್ಮೀನಾರಾಯಣ ಹಾಗೂ ಕಲೈಮಾಮಣಿ ಮನ್ನಾರ್‌ಗುಡಿ ಈಶ್ವರನ್‌ರವರುಗಳ ಶಿಷ್ಯರು. ವಿದುಷಿ ಎಚ್.ಎಸ್. ಮಹಾಲಕ್ಷ್ಮಿಯವರ ಬಳಿ ಕರ್ನಾಟಕ ಶಾಸ್ತ್ರೀಯ ಸಂಗೀತವನ್ನು ಕಲಿಯುತ್ತಿದ್ದಾರೆ. ಆಕಾಶವಾಣಿಯ 'ಎ' ಶ್ರೇಣಿ ಕಲಾವಿದರು. ಹಲವಾರು ಪ್ರಶಸ್ತಿ, ಪುರಸ್ಕಾರಗಳನ್ನು ಪಡೆದಿರುವರು.

**ವಿದ್ವಾನ್ ಎಸ್. ಮಂಜುನಾಥ್‌ರವರು** ವಿದ್ವಾನ್ ಟಿ.ವಿ. ಭದ್ರಾಚಾರ್ ಮತ್ತು ವಿದ್ವಾನ್ ತುಮಕೂರು ಬಿ. ರವಿಶಂಕರ್‌ರವರ ಬಳಿ ಕ್ರಮವಾಗಿ ಘಟಂ ಮತ್ತು ಮೃದಂಗ ವಾದನವನ್ನು ಕಲಿತಿದ್ದಾರೆ. ಹಲವಾರು ಸಿ.ಡಿ.ಗಳಿಗೆ ಪಕ್ಕವಾದ್ಯ ಸಹಕಾರ ನೀಡಿದ್ದಾರೆ. ಜೆಎಸ್‌ಎಸ್ ಸಂಸ್ಥೆಯ ಪ್ರೌಢಶಾಲೆಯಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

# ಬೆಳದಿಂಗಳ ಸಂಗೀತ 279

**12 ಮೇ 2025**

**ದ್ವಂದ್ವ ವಯೊಲಿನ್**

**ವಿದ್ವಾನ್ ಡಾ. ಮೈಸೂರು ಮಂಜುನಾಥ್**

**ವಿದ್ವಾನ್ ಸುಮಂತ್ ಮಂಜುನಾಥ್**

**ಮೃದಂಗ**

**ವಿದ್ವಾನ್ ನೈವೇಲಿ ವೆಂಕಟೇಶ್**

**ಘಟಂ**

**ವಿದ್ವಾನ್ ವಾಜಪಳ್ಳಿ ಕೃಷ್ಣಕುಮಾರ್**

---

ಫೋನ್: 0821–2548221, 2548223 * ಇಮೇಲ್: sutturmath@jssonline.org